# ಸತ್ಯ ಅರಿತವನ ಸುತ್ತುವರಿದು

ಒಮ್ಮೊಮ್ಮೆ ಕೆಲವೊಮ್ಮೆ ಹಗುರ ಧಾಟಿಯಲ್ಲಿ ಹೇಳುವ ಕಥೆಗಳೂ ಸ್ವಾರಸ್ಯಕರವಾಗಿರುತ್ತವೆ ಮತ್ತು ಸಮಾಜದ ಹುಳುಕುಗಳನ್ನು ಎತ್ತಿ ತೋರಿಸಿ ಗೇಲಿ ಮಾಡುವಂತಿರುತ್ತವೆ. ಅತಿ ಪುರಾತನ ಕಥೆಯೊಂದು ಹೀಗಿದೆಯಂತೆ. ಹೆದರಿದಂತೆ ಕಂಡ ಎಳೆಯ ಸೈತಾನನೊಬ್ಬ ಓಡೋಡಿ ಬಂದು ತನ್ನ ಯಜಮಾನ ಮುದಿ ಸೈತಾನನಿಗೆ ಹೇಳುತ್ತಾನೆ 'ಭೂಮಿಯಲ್ಲಿ ಯಾರೋ ಒಬ್ಬನಿಗೆ ಸತ್ಯ ತಿಳಿದುಹೋಗಿದೆಯಂತೆ, ಕೂಡಲೇ ನಾವು ಏನಾದರೂ ಮಾಡಬೇಕು, ಇಲ್ಲದಿದ್ದರೆ ನಮ್ಮ ಉದ್ಯೋಗಕ್ಕೆ ಕುತ್ತು ಬೀಳುತ್ತದೆ'. ಅದಕ್ಕೆ ಹಿರಿಯ ಸೈತಾನ ಹೇಳಿದ 'ಕುಳಿತುಕೊ, ಗಾಬರಿಯಾಗಬೇಡ ನಮ್ಮ ಜನ ಈಗಾಗಲೇ ಅಲ್ಲಿದ್ದಾರೆ'. ಎಳೆಯನ ಉತ್ತರ; 'ನಾನು ಈಗತಾನೆ ಅಲ್ಲಿಂದ ಬರುತ್ತಿದ್ದೇನೆ, ಯಾವೊಬ್ಬ ಸೈತಾನನ್ನು ನಾನು ನೋಡಲಿಲ್ಲ'. ಹಿರಿಯ ಸೈತಾನ ನಸುನಗುತ್ತಾ ಹೇಳಿದ 'ಅವರು ಪುರೋಹಿತರ ವೇಷದಲ್ಲಿದ್ದಾರೆ, ಅವರೆಲ್ಲ ನನ್ನ ಜನಗಳೆ ಅವರು ಈಗಾಗಲೇ ಸತ್ಯ ಗೊತ್ತಿರುವವನನ್ನು ಸುತ್ತುವರಿದಿದ್ದಾರೆ! ಅವರು ಸತ್ಯ ಬಲ್ಲವನಿಗೂ ಮತ್ತು ಜನಸಾಮಾನ್ಯರಿಗೂ ನಡುವೆ ಮಧ್ಯವರ್ತಿಗಳಾಗಿರುತ್ತಾರೆ. ಅವರು ದೇವಸ್ಥಾನಗಳನ್ನು ಕಟ್ಟಿಸುತ್ತಾರೆ, ಶಾಸ್ತ್ರಗಳನ್ನು ರಚಿಸುತ್ತಾರೆ, ಅವುಗಳ ಅರ್ಥ ವಿವರಿಸುತ್ತಾರೆ, ಎಲ್ಲವನ್ನೂ ವಿರೂಪಗೊಳಿಸುತ್ತಾರೆ. ಆ ಜನರಿಗೆ ಆರಾಧಿಸುವುದನ್ನು, ಪ್ರಾರ್ಥಿಸುವುದನ್ನೂ ಹೇಳಿಕೊಡುತ್ತಾರೆ. ಈ ಜಂಜಡದಲ್ಲಿ ಸತ್ಯ ಎಲ್ಲೋ ಕಳೆದುಹೋಗಿರುತ್ತದೆ. ಇದು ನನ್ನ ಹಳೆಯ ತಂತ್ರ, ಯಾವಾಗಲೂ ಗೆಲುವನ್ನೇ ನೀಡಿದೆ'.

ಈ ಕಥೆಯನ್ನು ನೆನಪಿಸಿಕೊಳ್ಳುತ್ತಿರುವುದಕ್ಕೆ ಕಾರಣವಿಷ್ಟೆ. ನಮ್ಮ ಜನರು ಪುರೋಹಿತರನ್ನು, ಮಠಾಧೀಶರನ್ನು, ಧರ್ಮಾಧಿಕಾರಿಗಳನ್ನು ಇನ್ನೂ ಮುಂದುವರೆದು ಜ್ಯೋತಿಷಿಗಳನ್ನು, ವಾಸ್ತು ಪಂಡಿತರನ್ನು ಸಾಕ್ಷಾತ್ ದೇವರ ಪ್ರತಿನಿಧಿಗಳೆಂದು ತಿಳಿದು ಅತ್ಯಂತ ಪೂಜನೀಯ ಭಾವದಿಂದ ನಡೆದುಕೊಳ್ಳುತ್ತಾರೆ. ತಮಗರಿವಿಲ್ಲದಂತೆಯೆ ತಮ್ಮ ದೈನಂದಿನ ಪ್ರಾಪಂಚಿಕ ಬದುಕಿನ ಪ್ರತಿ ನಡೆಯೂ ಅವರ ನಿರ್ದೇಶನದಂತೆಯೆ, ನಿಯಂತ್ರಣದಲ್ಲಿಯೇ ನಡೆಯುತ್ತಿರುತ್ತದೆ. ಕರ್ನಾಟಕದಲ್ಲಿ ಸಾವಿರಾರು ಅಧಿಕೃತ ಮಠಗಳಿವೆ. ಇನ್ನು ಹಳ್ಳಿಗಳಲ್ಲಿರುವ ಎಲ್ಲ ಜಾತಿಯ ಪುರೋಹಿತರು, ನಗರಗಳಲ್ಲಿ ಪೌರೋಹಿತ್ಯ ನಡೆಸಿಕೊಡುವ ಅರೆಕಾಲಿಕರು. ಬಿಡುವಿಲ್ಲದ ಜ್ಯೋತಿಷಿಗಳು, ಎಲ್ಲರೂ ಸೇರಿದರೆ ಲಕ್ಷಾಂತರ ಮಂದಿ ಈ ಪುಣ್ಯಕಾರ್ಯದಲ್ಲಿ(?) ತೊಡಗಿಕೊಂಡಿದ್ದಾರೆ. ಆದರೂ ಈ ಸಮಾಜವು ಮೌಢ್ಯದ ಕಂದರದಲ್ಲಿ ಮುಳುಗಿದೆ. ಕೆಲವೊಮ್ಮೆ ಬೆಚ್ಚಿಬೀಳಿಸುವ ಸುದ್ದಿಗಳು ಹೊರಬಿದ್ದು ನಾವು ಯಾವ ಯುಗದಲ್ಲಿದ್ದೇವೆ ಎಂಬ ದಿಗಿಲು ಮೂಡುತ್ತದೆ.

ಈ ದೇಶದಲ್ಲಿ ಎಷ್ಟು ಜಾತಿಗಳಿವೆಯೋ ಅಷ್ಟು ಜೀವನ ವಿಧಾನಗಳಿವೆ. ಒಂದು ಜಾತಿಯ ಜೀವನ ವಿಧಾನ ಇನ್ನೊಂದು ಜಾತಿಗೆ ತಿಳಿದಿರುವುದಿಲ್ಲ. ಕೆಲವು ಮೌಢ್ಯ, ಕಂದಾಚಾರಗಳು ಸಹ ಜಾತಿನಿಷ್ಠವಾಗಿರುತ್ತವೆ. ಇತ್ತೀಚೆಗೆ ವರದಿಯಾದ ಗೊಲ್ಲರಹಟ್ಟಿಯ ಕಥೆಯೆ ಇದಕ್ಕೆ ಉದಾಹರಣೆ. ತಿಂಗಳಲ್ಲಿ ಋತುಸ್ರಾವದ ಮೂರು ದಿನಗಳು ಹೆಣ್ಣುಮಕ್ಕಳು ಊರ ಹೊರಗೆ ಇರಬೇಕಾಗುತ್ತದೆ. ಅಷ್ಟೆ ಅಲ್ಲ, ಹುಟ್ಟು ಕೂಡ ಅಲ್ಲಿ ಸೂತಕವೆ! ಹಸುಳೆ ಮತ್ತು ಹಸಿ ಬಾಣಂತಿ ಇಬ್ಬರನ್ನೂ ಊರಿನಿಂದ ಹೊರಗೆ ಇರಿಸಲಾಗುತ್ತದೆ. ಇಂಥ ಶಾಸನವನ್ನು ಸೈತಾನನಲ್ಲದೆ ಬೇರೆ ಯಾರು ವಿಧಿಸಲು ಸಾಧ್ಯ?

ಕಳೆದೆರಡು ವರ್ಷಗಳಿಂದ ಮಡೆಮಡೆ ಸ್ನಾನದ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇವೆ. ವಿಷಯ ನ್ಯಾಯಾಲಯದ ಮೆಟ್ಟಿಲನ್ನೂ ಏರಿದೆ. ಒಂದು ಜಾತಿ ಉಂಡು ಬಿಟ್ಟ ಎಂಜಲೆಲೆಯ ಮೇಲೆ ಉರುಳಾಡಿ ರೋಗ ವಾಸಿಮಾಡಿಕೊಳ್ಳುವ, ಪಾಪ ನಿವಾರಿಸಿಕೊಳ್ಳುವ ಇನ್ನೊಂದು ಜಾತಿಯಿದೆ. ಅದನ್ನು ಸಮರ್ಥಿಸಿಕೊಳ್ಳಲು ಇನ್ನು ಕೆಲವು ಜಾತಿಗಳು ಸೇರಿಕೊಳ್ಳುತ್ತವೆ. ಸ್ವತಃ ಮಲೆಕುಡಿಯರೆ ಎಂಜಲೆಲೆಯ ಮೇಲೆ ಉರುಳಾಡುವುದು ನಮ್ಮ ಹಕ್ಕು ಎಂದು ಪ್ರತಿಪಾದಿಸುತ್ತಾರೆ. ಇಂಥ ಅವೈಚಾರಿಕ ಪದ್ಧತಿಗಳು ಬೇರೆ ಜಾತಿಯಲ್ಲಿ ಯಾಕಿಲ್ಲ ಎಂಬ ಕಲಿತವರ ಪ್ರಶ್ನೆಯನ್ನು ಆಯಾ ಜಾತಿಯ ಪುರೋಹಿತ ವರ್ಗ ಸಹಿಸುವುದಿಲ್ಲ. ಇದು ಅಮಾನವೀಯ ಎಂದರೆ ಅವರು ಒಪ್ಪುವವರಲ್ಲ. ಇದು ಮಾನವ ಹಕ್ಕುಗಳ ಉಲ್ಲಂಘನೆ ಎಂದರೆ ಅರ್ಥವಾಗುವುದಿಲ್ಲ. ಇದು ಸೈತಾನನ ಪ್ರೇರಣೆಯಲ್ಲದೆ ಇನ್ನೇನು?

ಇತ್ತೀಚೆಗೆ ಸಂತರ ಸಮಾವೇಶಗಳು ನಡೆಯುತ್ತಿವೆ. ಅಲ್ಲಿ ಮೂಢನಂಬಿಕೆ, ಕಂದಾಚಾರ, ಪ್ರಾಣಿ ಬಲಿ, ಜಾತಿ ಭೇದ, ಅಸ್ಪೃಶ್ಯತೆ, ಅನಕ್ಷರತೆ ಮುಂತಾದ ಸಾಮಾಜಿಕ ಪಿಡುಗುಗಳನ್ನು ಕುರಿತು ಚರ್ಚೆ ನಡೆಯುವುದು ಕಡಿಮೆ. ಅದಕ್ಕಾಗಿ ಯಾವ ಕ್ರಿಯಾಯೋಜನೆಯೂ ಸಿದ್ಧಗೊಳ್ಳುವುದಿಲ್ಲ. ಆದರೆ ಎಲ್ಲರೂ ಒಕ್ಕೊರಲಿನಿಂದ ಸಾರುವುದು ಮತಾಂತರವನ್ನು ವಿರೋಧಿಸಬೇಕು ಎಂದು. ಸಮಸ್ಯೆಯ ಮೂಲವನ್ನು ಹುಡುಕಿ ಕಾರಣವನ್ನು ತಿಳಿದು ಇಲಾಜು ನೀಡುವ ಕಾರ್ಯಕ್ರಮ ಇವರಿಗೆ ಬೇಕಾಗಿರುವುದಿಲ್ಲ. ಯಾಕೆಂದರೆ ಅವರು ಸತ್ಯವನ್ನು ಅರಿತವನ ಹಿಂದೆ ಹೊರಟುಬಿಡುತ್ತಾರೆ. ಆಗ ಇವರ ಉದ್ಯೋಗಕ್ಕೆ ಕುತ್ತು ಬೀಳುತ್ತದೆ!

ಮೌಢ್ಯವನ್ನು ವಿರೋಧಿಸುವ ಸಂತರೂ ಇದ್ದಾರೆ ಎನ್ನುವುದು ಸಮಾಧಾನಕರ. ಪುರೋಹಿತರು ಧರ್ಮಸ್ನೇಹಿಯಾಗಿದ್ದರೆ ದೇವರನ್ನು ಜನಸ್ನೇಹಿಯಾಗಿಸಬಹುದು. ಅವರು ಧರ್ಮವಿಹೀನರಾದಾಗ ಜನರಲ್ಲಿ ದೇವರ ಬಗ್ಗೆ ಭಯ ಹುಟ್ಟಿಸಿ ಮೌಢ್ಯ, ಕಂದಾಚಾರಗಳಲ್ಲಿ ಮುಳುಗಿಸಬಹುದು.

■ ಮೂಚಿ

## ಮಾತೇ ಮುತ್ತು

★ ಅಲ್ಲೊ ನಮ್ಮ ನಾಲ್ಕು ದಿನದ
ರಾಜಕೀಯ ನಾಟಕ
ನೃಪತುಂಗನೆ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ!

-ಕುವೆಂಪು

★ ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು ಅದಕೋ
ಅದರಿಚ್ಛೆ ಹಾದಿ ಇದಕು ಹರಿದತ್ತ ಬೀದಿ.

-ಪು.ತಿ. ನರಸಿಂಹಾಚಾರ್

★ ನಿಮ್ಮ ಕನಸುಗಳನ್ನು ನನಸು ಮಾಡಬೇಕಿದ್ದರೆ ಮೊದಲು ನಿದ್ದೆಯಿಂದ ಏಳಬೇಕು.

-ಪೌಲ್ ವ್ಯಾಲರಿ

★ ಸಂತೋಷ ಎನ್ನುವುದು ನಿಮ್ಮ ಒಳಗೇ ಇದೆ, ಅದನ್ನು ಹೊರಗಡೆ ಹುಡುಕಾಡುತ್ತಾ ಆಸೆ ಪಡುವುದು ತಪ್ಪು.

-ರಮಣ ಮಹರ್ಷಿ

★ ಚಾರಿತ್ರ್ಯ ಸುಲಭವಾಗಿ, ತನ್ನಷ್ಟಕ್ಕೆ ಉತ್ತಮಗೊಳ್ಳುವುದಿಲ್ಲ. ಪರೀಕ್ಷೆಗೆ ಒಳಗಾದ ಅನುಭವ ಮತ್ತು ಸಂಕಷ್ಟಗಳನ್ನು ಎದುರಿಸಿಯೇ ಆತ್ಮ ಬಲಗೊಳ್ಳುತ್ತದೆ, ಹೆಬ್ಬಯಕೆ ಉದ್ದೀಪನಗೊಳ್ಳುತ್ತದೆ, ಯಶಸ್ಸು ಸಿಗುತ್ತದೆ.

-ಹೆಲೆನ್ ಕೆಲ್ಲರ್

★ ಯುವಕರ ಜತೆ ಕೆಲಸ ಮಾಡುವುದು ಒಳ್ಳೆಯದು. ಅವರೇ ನಮ್ಮ ಭರವಸೆ. ಆದರೆ ತಾಳ್ಮೆಯಿಂದ, ಸ್ಥಿರವಾಗಿ ಮತ್ತು ಹೆಚ್ಚು ಗದ್ದಲವಿಲ್ಲದೆ ಕೆಲಸ ಮಾಡಬೇಕು.

-ಸ್ವಾಮಿ ವಿವೇಕಾನಂದ

★ ಸಣ್ಣ ವಿಷಯಗಳಲ್ಲೂ ಸತ್ಯವನ್ನು ಗಂಭೀರವಾಗಿ ತೆಗೆದುಕೊಳ್ಳದವನನ್ನು ದೊಡ್ಡ ವಿಷಯಗಳಲ್ಲಿ ಗಂಭೀರವಾಗಿ ಪರಿಗಣಿಸಲು ಆಗುವುದಿಲ್ಲ.

-ಆಲ್ಬರ್ಟ್ ಐನ್‌ಸ್ಟೀನ್

★ ಸ್ನೇಹಿತರಿಗೆ ನಿಕಟವಾಗಿರಿ; ಶತ್ರುಗಳಿಗೆ ಇನ್ನಷ್ಟು ನಿಕಟವಾಗಿರಿ.

-ಸನ್ ಇಝು

★ ಎಲ್ಲರಿಗೂ ಭವಿಷ್ಯ ಇದೆ, ಆದರೆ ಅದನ್ನು ಜಾಣತನದಿಂದ ವಿತರಿಸಲಾಗಿಲ್ಲ ಅಷ್ಟೆ!

-ವಿಲಿಯಂ ಗಿಬ್ಸನ್

★ ನೀವು ಜೀವಂತ ಇರುವಾಗಲೇ ನಿಮ್ಮನ್ನು ಕಟ್ಟಿರುವ ಹಗ್ಗಗಳನ್ನು ಬಿಚ್ಚಿಕೊಳ್ಳದಿದ್ದರೆ, ನೀವು ಸತ್ತ ಮೇಲೆ ಏನು ಭೂತಗಳು ಬಂದು ಅವನ್ನು ಬಿಚ್ಚುತ್ತವೆಯೆ?

-ಸಂತ ಕಬೀರ

★ ಸಣ್ಣ ವಿಷಯಗಳಲ್ಲೂ ಸತ್ಯವನ್ನು ಗಂಭೀರವಾಗಿ ತೆಗೆದುಕೊಳ್ಳದವನನ್ನು ದೊಡ್ಡ ವಿಷಯಗಳಲ್ಲಿ ಗಂಭೀರವಾಗಿ ಪರಿಗಣಿಸಲು ಆಗುವುದಿಲ್ಲ.

-ಆಲ್ಬರ್ಟ್ ಐನ್‌ಸ್ಟೀನ್